**All India Radio: Bangalore**
**National Bulletin In Kannada**
**13.11.2025 1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**13.11.2025 1.10 p.m.**

**<><><><>**

**ಮುಖ್ಯಾಂಶಗಳು**

**೧. ರಫ್ತುದಾರರಿಗೆ ಸಾಲ ಖಾತರಿ ಯೋಜನೆಯಿಂದ ಜಾಗತಿಕ ಸ್ಪರ್ಧೆ ಹೆಚ್ಚಳ ; ಸ್ವಾವಲಂಬಿ ಭಾರತ ನಿರ್ಮಾಣಕ್ಕೂ ಸಹಕಾರಿ-ಪ್ರಧಾನಿ ನರೇಂದ್ರ ಮೋದಿ**

**೨. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆದಿವಾಸಿ ಉತ್ಪನ್ನಗಳ ರಫ್ತು ಉತ್ತೇಜನಕ್ಕೆ ಕ್ರಮ - ಸಚಿವ ಪಿಯೂಷ್ ಗೋಯಲ್**

**೩. ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್ ಮಂಗಳೂರು ಭೇಟಿ ; ಇಂದು ನವ ಮಂಗಳೂರು ಬಂದರಿನ ೫೦ನೇ ವರ್ಷಾಚರಣೆಯಲ್ಲಿ ಭಾಗಿ**

**೪. ಬಿಹಾರ ವಿಧಾನಸಭಾ ಚುನಾವಣೆ ; ನಾಳೆ ಬಿಗಿ ಭದ್ರತೆಯಲ್ಲಿ ೩೮ ಜಿಲ್ಲೆಗಳಲ್ಲಿ ಮತ ಎಣಿಕೆ**

**೫. ಭಾರತ - ದಕ್ಷಿಣ ಆಫ್ರಿಕಾ ನಡುವಿನ ಎರಡು ಟೆಸ್ಟ್ ಪಂದ್ಯಗಳ ಕ್ರಿಕೆಟ್ ಸರಣಿ ನಾಳೆಯಿಂದ ಆರಂಭ**

**<><><><>**

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಕೇಂದ್ರ ಸಚಿವ ಸಂಪುಟ ಸಭೆ, ದೆಹಲಿಯ ಕೆಂಪು ಕೋಟೆಯ ಬಳಿ ನಡೆದ ಕಾರು ಸ್ಫೋಟ ಘಟನೆಯನ್ನು ಖಂಡಿಸಿ ನಿರ್ಣಯವನ್ನು ಅಂಗೀಕರಿಸಿದೆ.

**ಧ್ವನಿ : ಅಶ್ವಿನಿ ವೈಷ್ಣವ್ (೧೯ ಸೆಕೆಂಡ್‌ಗಳು)**

**<><><><>**

ಕೇಂದ್ರ ಸಂಪುಟ ಅನುಮೋದಿಸಿರುವ ರಫ್ತುದಾರರಿಗಾಗಿ ಸಾಲ ಖಾತರಿ ಯೋಜನೆಯಡಿ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದಲ್ಲದೇ ವಾಣಿಜ್ಯ ವ್ಯವಹಾರಗಳನ್ನು ಸುಲಭಗೊಳಿಸುತ್ತದೆ ಹಾಗೂ ಭಾರತ ಸ್ವಾವಲಂಬಿ ರಾಷ್ಟ್ರವಾಗಲು ಸಹಕಾರಿಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅವರು, ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್ ಸರಣಿಯಲ್ಲಿ ಕೇಂದ್ರ ಸಂಪುಟದ ನಿರ್ಣಯವನ್ನು ಶ್ಲಾಘಿಸಿದ್ದಾರೆ. ರಫ್ತು ಉತ್ತೇಜನ ಮಿಷನ್ – ಇಪಿಎಂ ರಫ್ತು ವಲಯದಲ್ಲಿ ಸ್ಪರ್ಧೆಯನ್ನು ಸುಧಾರಿಸುವುದಲ್ಲೇ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ, ಮೊದಲ ಬಾರಿ ರಫ್ತುಗಾರರಿಗೆ ಹಾಗೂ ಕಾರ್ಮಿಕ ಆಧರಿತ ವಲಯಗಳ ಅಭಿವೃದ್ಧಿಗೆ ನೆರವಾಗಲಿದೆ ಎಂದು

ತಿಳಿಸಿದ್ದಾರೆ. ಕೆಲವೊಂದು ನಿರ್ಣಾಯಕ ಖನಿಜಗಳ ಗೌರವಧನವನ್ನು ಹೆಚ್ಚಳ ಮಾಡಲು ಸಂಪುಟ ಕೈಗೊಂಡಿರುವ ತೀರ್ಮಾನದಿಂದ ಸುಸ್ಥಿರತೆ ಮತ್ತು ಸ್ವಾವಲಂಬನೆಗೆ ಉತ್ತೇಜನ ದೊರಕಲಿದೆ ಮತ್ತು ಪೂರೈಕೆ ಸರಣಿ ಬಲವರ್ಧನೆ ಹಾಗೂ ಹೊಸ ಉದ್ಯೋಗಗಳ ಸೃಷ್ಟಿಗೆ ಸಹಕಾರಿಯಾಗಲಿದೆ ಎಂದು ಪ್ರಧಾನಿ ಹೇಳಿದ್ದಾರೆ.

**<><><><>**

ರಫ್ತು ಸಾಮರ್ಥ್ಯವಿರುವ ಎಲ್ಲಾ ಬಗೆಯ ಆದಿವಾಸಿ ಉತ್ಪನ್ನಗಳನ್ನು ಸರ್ಕಾರ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತೇಜಿಸಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಅವರು, ದೆಹಲಿಯಲ್ಲಿ ಬುಡಕಟ್ಟು ವಾಣಿಜ್ಯ ಶೃಂಗಸಭೆ - ೨೦೨೫ ಉದ್ದೇಶಿಸಿ ಮಾತನಾಡಿ, ಆದಿವಾಸಿ ಉತ್ಪನ್ನಗಳು ಮತ್ತು ಕರಕುಶಲ ವಸ್ತುಗಳಿಗೆ ದೇಶೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿಪುಲ ಅವಕಾಶಗಳಿವೆ ಎಂದರು. ಸದ್ಯ ಸರ್ಕಾರ ಬುಡಕಟ್ಟು ಜನರ ಕಲೆ ಮತ್ತು ಉತ್ಪನ್ನಗಳನ್ನು ಗುರುತಿಸಿ, ಅವುಗಳಿಗೆ ಮಾರುಕಟ್ಟೆ ಒದಗಿಸುವ ಜೊತೆಗೆ ರಫ್ತು ಉತ್ತೇಜನಕ್ಕೂ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮೂರು ಸಾವಿರದ ೯೦೦ ವನ ಧನ ಕೇಂದ್ರಗಳು ೧೨ ಲಕ್ಷ ಆದಿವಾಸಿ ಸಮುದಾಯದವರ ಏಳಿಗೆಗಾಗಿ ಶ್ರಮಿಸುತ್ತಿವೆ. ಬುಡಕಟ್ಟು ಸಚಿವಾಲಯಕ್ಕೆ ಈ ವರ್ಷ ಬಜೆಟ್ ಹಂಚಿಕೆಯನ್ನು ಶೇಕಡ ೫೦ ರಷ್ಟು ಹೆಚ್ಚಳ ಮಾಡಲಾಗಿದೆ. ವನ ಧನ ವ್ಯಾಪಾರ ಧನವಾಗಿ ಬದಲಾಗಬೇಕು ಎಂದು ಅವರು ಕರೆ ನೀಡಿದರು.

**<><><><>**

ಮಂಗಳೂರು ಪ್ರವಾಸ ಕೈಗೊಂಡಿರುವ  ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಸಚಿವ ಸರ್ಬಾನಂದ ಸೊನೋವಾಲ್, ಮಂಗಳೂರಿಗೆ ಆಗಮಿಸಿದ್ದಾರೆ. ಸಚಿವ ಸೋನೋವಾಲ್, ಇಂದು ಮಂಗಳೂರು ಮರೈನ್ ಕಾಲೇಜ್ ಆಂಡ್ ಟೆಕ್ನಾಲಜಿ ಕ್ಯಾಂಪಸ್‌ಗೆ ಭೇಟಿ ನೀಡಲಿದ್ದು, ನವೀಕೃತ ಕ್ಯಾಂಪಸ್ ಅನ್ನು ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ ಅವರು ನವ ಮಂಗಳೂರು ಬಂದರು ಪ್ರಾಧಿಕಾರ ೫೦ನೆಯ ವರ್ಷಾಚರಣೆಯ ಸಂಭ್ರಮ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಸಚಿವರು ನವ ಮಂಗಳೂರು ಬಂದರಿನಲ್ಲಿ ಕೈಗೊಂಡಿರುವ ೧ ಸಾವಿರದ ೫೦೦ ಕೋಟಿ ರೂಪಾಯಿ ಮೌಲ್ಯದ ೨೦ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

**<><><><>**

ಬಿಹಾರ ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯ ನಾಳೆ ನಡೆಯಲಿದೆ. ಬಿಹಾರದ ೩೮ ಜಿಲ್ಲೆಗಳ ೪೬ ಮತ ಎಣಿಕೆ ಕೇಂದ್ರಗಳಲ್ಲಿ ಎಣಿಕೆ ಕಾರ್ಯ ನಡೆಯಲಿದೆ. ಮತಗಟ್ಟೆಗಳಿಂದ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧರಿಸುವ ವಿದ್ಯುನ್ಮಾನ ಮತಯಂತ್ರಗಳನ್ನು ಬಾರಿ ಬಿಗಿ ಭದ್ರತೆಯಲ್ಲಿ ತಂದು ಸ್ಟ್ರಾಂಗ್ ರೂಂಗಳಲ್ಲಿ ಇಡಲಾಗಿದ್ದು, ಅವುಗಳ ಸುತ್ತ ಮೂರು ಹಂತದ ಭದ್ರತಾ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ರಾಜ್ಯ ಪೊಲೀಸರ ಜೊತೆಗೆ ಕೇಂದ್ರೀಯ ಸಶಸ್ತ್ರ ಮೀಸಲು ಪೊಲೀಸ್ ಪಡೆಗಳು ಭದ್ರತೆ ಹೊಣೆಯನ್ನು ಹೊತ್ತಿವೆ. ಮತ ಎಣಿಕೆ ಕೇಂದ್ರಗಳ ಸುತ್ತ

ಸಿಸಿಟಿವಿ ಅಳವಡಿಸಿ ನಿಯಂತ್ರಣ ಕೊಠಡಿಗಳನ್ನು ತೆರೆದು ನಿಗಾ ವಹಿಸಲಾಗುತ್ತದೆ. ಅರ್ಜಿ ನಮೂನೆ ೧೭-ಸಿ ಮತ್ತು ಇವಿಎಂ ದತ್ತಾಂಶದ ನಡುವೆ ಹೊಂದಣಿಕೆಯಾಗದಿದ್ದರೆ ವಿವಿಪ್ಯಾಟ್ ಎಣಿಕೆ ಕಡ್ಡಾಯ ಎಂದು ಚುನಾವಣಾ ಆಯೋಗ ಹೇಳಿದೆ. ನಾಳೆ ಬೆಳಗ್ಗೆ ೮ ಗಂಟೆಗೆ ಮತ ಎಣಿಕೆ ಕಾರ್ಯ ಆರಂಭವಾಗಲಿದೆ.

**<><><><>**

ಪ್ರಾಜೆಕ್ಟ್ ಚೀತಾ ಅಡಿಯಲ್ಲಿ ಬೋಟ್ಸ್ವಾನಾ ಇಂದು ಭಾರತಕ್ಕೆ ಎಂಟು ಚೀತಾಗಳನ್ನು ಹಸ್ತಾಂತರಿಸಲಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಬೋಟ್ಸ್ವಾನಾದ ಅವರ ಸಹವರ್ತಿ ಡುಮಾ ಬೊಕೊ ನಡುವಿನ ದ್ವಿಪಕ್ಷೀಯ ಮಾತುಕತೆಯಲ್ಲಿ ಇದನ್ನು ಘೋಷಿಸಲಾಗಿದೆ. ಭಾರತ ಮತ್ತು ಬೋಟ್ಸ್ವಾನಾ ರಾಷ್ಟ್ರಪತಿಗಳು ಸೆರೆಹಿಡಿದ ಚಿರತೆಗಳನ್ನು ಗ್ಯಾಬೊರೋನ್ ಬಳಿಯ ಕ್ವಾರಂಟೈನ್ ಸೌಲಭ್ಯಕ್ಕೆ ಬಿಡುಗಡೆ ಮಾಡುವುದನ್ನು ವೀಕ್ಷಿಸಲಿದ್ದಾರೆ. ಈ ಕಾರ್ಯಕ್ರಮವು ಬೋಟ್ಸ್ವಾನಾ ಭಾರತಕ್ಕೆ ಚಿರತೆಗಳ ಸಾಂಕೇತಿಕ ದಾನವನ್ನು ಗುರುತಿಸುತ್ತದೆ. ಹಸ್ತಾಂತರವು ಎರಡು ದೇಶಗಳ ನಡುವಿನ ವನ್ಯಜೀವಿ ಸಂರಕ್ಷಣೆಯಲ್ಲಿ ದ್ವಿಪಕ್ಷೀಯ ಸಹಕಾರದ ಹೊಸ ಅಧ್ಯಾಯದ ಆರಂಭವನ್ನು ಸೂಚಿಸುತ್ತದೆ. ಈ ಕುರಿತು ನಮ್ಮ ಪ್ರತಿನಿಧಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

**ಧ್ವನಿ : ಚೀತಾ (೨೫ ಸೆಕೆಂಡ್‌ಗಳು)**

ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಮ್ಮ ಪ್ರವಾಸವನ್ನು ಮುಕ್ತಾಯಗೊಳಿಸುವ ಮುನ್ನ ಬೋಟ್ಸ್ವಾನಾದಲ್ಲಿರುವ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಲಿದ್ದಾರೆ.

**<><><><>**

ಕೇಂದ್ರ ಪ್ರವಾಸೋದಮ ಮತ್ತು ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ನಾಳೆ ಸಿಕ್ಕಿಂನಲ್ಲಿ ಈಶಾನ್ಯ ರಾಜ್ಯಗಳ ೧೩ನೇ ಅಂತಾರಾಷ್ಟ್ರೀಯ ಪ್ರವಾಸಿ ಮೇಳವನ್ನು ಉದ್ಘಾಟಿಸಲಿದ್ದಾರೆ. ಈ ನಾಲ್ಕು ದಿನಗಳ ಮೇಳದಲ್ಲಿ ಈಶಾನ್ಯ ಭಾಗದಲ್ಲಿರುವ ಪ್ರವಾಸೋದ್ಯಮ ಸ್ಥಳಗಳ ಐತಿಹ್ಯ, ಅವುಗಳ ಸೌಂದರ್ಯವನ್ನು ಬಿಂಬಿಸಲಾಗುವುದು. ಆ ಭಾಗದಲ್ಲಿ ಅಡಗಿರುವ ಶ್ರೀಮಂತ, ನೈಸರ್ಗಿಕ ಸೊಬಗು, ಸಾಂಸ್ಕೃತಿಕ ವೈವಿಧ್ಯತೆ ಮತ್ತು ಸಾಹಸ ಪ್ರವಾಸೋದ್ಯಮ ಅವಕಾಶಗಳನ್ನು ಬಿಂಬಿಸುವ ಜೊತೆಗೆ ಸುಸ್ಥಿರ ಮತ್ತು ಎಲ್ಲವನ್ನು ಒಳಗೊಂಡ ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನ ನೀಡಲಾಗುವುದು. ಈ ಮೇಳದಲ್ಲಿ ಸ್ಪೇನ್, ಥೈಲ್ಯಾಂಡ್, ಫ್ರಾನ್ಸ್, ರಷ್ಯಾ, ಜರ್ಮನಿ ಸೇರಿದಂತೆ ೧೯ ರಾಷ್ಟ್ರಗಳು ಭಾಗವಹಿಸಲಿವೆ. ಮೇಳದಲ್ಲಿ ಈಶಾನ್ಯ ರಾಜ್ಯಗಳನ್ನು ಬಿಂಬಿಸುವ ಶ್ರೀಮಂತ ಕಲೆ ಹಾಗೂ ಪರಂಪರೆಗಳನ್ನು ಸಹ ಪ್ರದರ್ಶಿಸಲಾಗುವುದು.

**<><><><>**

ಬಿಜೆಪಿ ಸಂಸದೆ ಅಪರಾಜಿತಾ ಸಾರಂಗಿ ಅವರನ್ನು ಸಂವಿಧಾನ ೧೩೦ನೇ ತಿದ್ದುಪಡಿ ಮಸೂದೆ, ೨೦೨೫, ಜಮ್ಮು ಮತ್ತು ಕಾಶ್ಮೀರ ಪುನಾಚನೆ ತಿದ್ದುಪಡಿ ಮಸೂದೆ, ೨೦೨೫ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ತಿದ್ದುಪಡಿ ಮಸೂದೆ, ೨೦೨೫ ಪರಿಶೀಲಿಸುವ ಸಂಸತ್ತಿನ ಜಂಟಿ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಮೂವತ್ತೊಂದು ಸದಸ್ಯರ ಸಮಿತಿಯಲ್ಲಿ ಬಿಜೆಪಿಯ ಹದಿನೈದು, ಎನ್‌ಡಿಎ ಮಿತ್ರಪಕ್ಷಗಳ ಹನ್ನೊಂದು ಸಂಸದರು, ವಿರೋಧ ಪಕ್ಷದಿಂದ ನಾಲ್ವರು ಮತ್ತು ಒಬ್ಬ ನಾಮನಿರ್ದೇಶಿತ ಸದಸ್ಯರು ಸೇರಿದ್ದಾರೆ. ಕಳೆದ ಮುಂಗಾರು ಅಧಿವೇಶನದ ಕೊನೆಯ ದಿನದಂದು ಮಂಡಿಸಿದ ಮೂರು ಮಸೂದೆಗಳು, ಗಂಭೀರ ಆರೋಪಗಳ ಮೇಲೆ ಪ್ರಧಾನಿ, ಮುಖ್ಯಮಂತ್ರಿ ಮತ್ತು ಸಚಿವರನ್ನು ಮೂವತ್ತು ದಿನಗಳ ಕಾಲ ಬಂಧನದಲ್ಲಿಟ್ಟರೆ ಅವರನ್ನು ಸ್ವಯಂಚಾಲಿತವಾಗಿ ಅಧಿಕಾರದಿಂದ ತೆಗೆದುಹಾಕುವ ಉದ್ದೇಶವನ್ನು ಹೊಂದಿವೆ. ಮಸೂದೆಗಳನ್ನು ಸಂಸತ್ತಿನ ಜಂಟಿ ಸಮಿತಿಯ ಪರಾಮರ್ಶೆಗೆ ಒಪ್ಪಿಸಲು ಲೋಕಸಭೆಯು ನಿರ್ಣಯವನ್ನು ಅಂಗೀಕರಿಸಿತ್ತು.

**<><><><>**

ಗೋವಾದಲ್ಲಿ ನಡೆಯುತ್ತಿರುವ ಫಿಡೆ ಚೆಸ್ ವಿಶ್ವಕಪ್‌ನ ೪ನೇ ಸುತ್ತಿನ ಪಂದ್ಯದಲ್ಲಿಂದು ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಎರಿಗೈಸಿ, ಆರ್. ಪ್ರಜ್ಞಾನಂದ ಮತ್ತು ಪೆಂಟಾಲ ಹರಿಕೃಷ್ಣ ಆಡಲಿದ್ದಾರೆ. ಮಧ್ಯಾಹ್ನ ೩ ಗಂಟೆಗೆ ಪಂದ್ಯ ಆರಂಭವಾಗಲಿದೆ.

**<><><><>**

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಪುರುಷರ ಎರಡು ಟೆಸ್ಟ್ ಪಂದ್ಯಗಳ ಕ್ರಿಕೆಟ್ ಸರಣಿ ನಾಳೆ ಆರಂಭವಾಗಿದೆ. ಆರಂಭಿಕ ಪಂದ್ಯ ಕೋಲ್ಕೊತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆಯಲಿದೆ. ಶುಭಮನ್‌ಗಿಲ್ ಪಡೆ ತನ್ನ ಗೆಲುವಿನ ಅಭಿಯಾನವನ್ನು ಮುಂದುವರೆಸುವ ತವಕದಲ್ಲಿದೆ. ವೆಸ್ಟ್ ಇಂಡೀಸ್ ವಿರುದ್ಧದ ಸರಣಿ ಕೈವಶ ಮಾಡಿಕೊಂಡಿರುವ ಭಾರತ ತಂಡ ಈ ಸರಣಿಯನ್ನು ಸಹ ಗೆಲ್ಲುವ ಆತ್ಮ ವಿಶ್ವಾಸದಲ್ಲಿದೆ.  ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಅಭಿಯಾನದಲ್ಲಿ ಭಾರತ ಮೂರನೇ ರ‍್ಯಾಂಕ್‌ನಲ್ಲಿದೆ.

**<><><><>ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><><><>**

**<><><><> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩p೦ ಕ್ಕೆ<><><><>**